ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

S.I.A & E.I.A ಪರಿಣಾಮಗಳ ಬಗ್ಗೆ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-

1196 (1355) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಹೊಸ ಭೂಸ್ವಾಧೀನ ಕಾಯ್ದೆ ಅನ್ವಯ ಸಾಮಾಜಿಕ ಪರಿಣಾಮ ಮೌಲ್ಯಮಾಪನ (S.I.A) ವನ್ನು ಯಾವ ಯಾವ ಭೂಸ್ವಾಧೀನ ಜಮೀನುಗಳಿಗೆ ಅನ್ವಯಿಸಲಾಗಿದೆ; ಇದರಿಂದ ಯಾವ ಯಾವ ಭೂಸ್ವಾಧೀನ ಜಮೀನುಗಳು ಹೊರತಾಗಿರುತ್ತವೆ; (ವಿವರವಾದ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ (S.I.A)ಯನ್ನು ಕಾರ್ಯಗತಗೊಳಿಸಲು ನೋಂದಾವಣಿ ಆದ ಎನ್.ಜಿ.ಓ ಗಳ ಸಂಖ್ಯೆ ಎಷ್ಟು; ವಿಳಾಸದೊಂದಿಗೆ ಮಾಹಿತಿ ನೀಡುವುದು;

(ಇ) ಪರಿಸರ ಪರಿಣಾಮ ಮೌಲ್ಯಮಾಪನ (E.I.A) ಅಧ್ಯಯನ ಎಂದರೇನು; ಯಾವ ಯಾವ ಭೂ ಸ್ವಾಧೀನ ಜಮೀನುಗಳಿಗೆ ಅನ್ವಯಿಸಲಾಗಿದೆ; ಇದರಿಂದ ಯಾವ ಯಾವ ಭೂಸ್ವಾಧೀನ ಜಮೀನುಗಳು ಹೊರತಾಗಿರುತ್ತವೆ; (ವಿವರವಾದ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ (E.I.A) ಕಾರ್ಯಗತಗೊಳಿಸಲು ನೋಂದಾವಣೆ ಆದ ಎನ್.ಜಿ.ಓ ಗಳ ಸಂಖ್ಯೆ ಎಷ್ಟು; (ವಿಳಾಸದೊಂದಿಗೆ ಮಾಹಿತಿ ನೀಡುವುದು)

(ಉ) ಕಳೆದ 3 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಈ 2 ಮೌಲ್ಯಮಾಪನಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಇವುಗಳನ್ನು ಯಾವ ಎನ್.ಜಿ.ಓ ಗಳಿಗೆ ಬಿಡುಗಡೆ ಮಾಡಲಾಗಿದೆ?